

ಡಾ.ವಿನೋದ ಛೆಬ್ಬಿ

**ಕೆಲವೊಮ್ಮೆ ಅವಗುಣಗಳೇ ಆಕರ್ಷಣೆಗಳಾಗಿ ಸಂಬಂಧಕ್ಕೆ ಅಂಟಿಕೊಳ್ಳುತ್ತೇವೆ!**

# 134: ಪತಿಯೆಂಬ ಮಗು-4

ಕೀರ್ತಿಯ ಒತ್ತಾಯದಿಂದ ನನ್ನಲ್ಲಿಗೆ ಬಂದ ಕಿಶೋರ ಆಕೆಯ ಅನುಬಂಧದ ಬೇಡಿಕೆಗೆ ಸ್ಪಂದಿಸದೆ ಎದ್ದು ಹೋದ ಎಂದು ಹೋದ ವಾರ ಹೇಳಿದ್ದೆನಷ್ಟೆ? ಇಂಥವನಿಗೆ ಅಂಟಿಕೊಂಡು ಅವಲಂಬಿತಳಾಗಿ ಅನುಭವಿಸುತ್ತಿರುವ ಕೀರ್ತಿಗೆ ವೈಯಕ್ತಿಕ ಚಿಕಿತ್ಸೆಗೆ ಬರಲು ಆಹ್ವಾನಿಸಿದ್ದೆ. ಮುಂದೆ ಅವಳೊಬ್ಬಳೇ ಬರಲು ಶುರುಮಾಡಿದಳು.

ಮುಂದಿನ ಸಂದರ್ಶನಗಳಲ್ಲಿ ಕೀರ್ತಿಯು ಕಿಶೋರನ ಅವಗುಣಗಳನ್ನು ಒಂದೊಂದಾಗಿ ದೃಷ್ಟಾಂತ ಸಹಿತ ವಿವರಿಸಿದಳು. ಅವನ ಬೂಟಾಟಿಕೆ, ಪೊಳ್ಳುತನ, ಗುಮ್ಮನಗುಸಕ ವರ್ತನೆ, ಸ್ವಾರ್ಥ, ಧನಮೋಹ, ಅಪನಂಬಿಕೆ, ನಿರ್ಭಾವುಕತೆ, ದೂರೀಕರಣ, ಕುತಂತ್ರ ಬುದ್ಧಿ– ಇವೆಲ್ಲವುಗಳಿಂದ ಆತ ತನ್ನ ಆತ್ಮೀಯನಾಗಲು ಅನರ್ಹ ಎಂದಳು. 'ಒಟ್ಟಿನಲ್ಲಿ ನಾನು ಬಯಸುವ ಮೌಲ್ಯಗಳು ಅವನಲ್ಲಿ ಒಂದೂ ಇಲ್ಲ ಎನ್ನಬಹುದು' ಎಂದಳು.

ನಾನು ಕೇಳಿದೆ: 'ಕೀರ್ತಿ, ಕಿಶೋರನೊಡನೆ ಪ್ರಬುದ್ಧ ಹಾಗೂ ಆರೋಗ್ಯಕರ ಬಾಂಧವ್ಯ ಕಟ್ಟಿಕೊಳ್ಳಲು ಹೆಣಗುತ್ತಿದ್ದೀರಿ. ಆದರೆ ಅವನೋ ಹಟಮಾರಿ ಬಾಲಕನಂತೆ ಮೊಂಡುತನ ತೋರುತ್ತಿದ್ದಾನೆ. ಅಲ್ಲದೆ ನೀವು ಬಯಸುವ ಮೌಲ್ಯಗಳೇ ಅವನಲ್ಲಿ ಇಲ್ಲವೆನ್ನುತ್ತೀರಿ. ಇಷ್ಟಾದರೂ ಅವನನ್ನು ಇಷ್ಟೊಂದು ಅವಲಂಬಿಸುತ್ತಿರುವುದರ ಕಾರಣ ಏನೆಂದು ಗೊತ್ತಾಗುತ್ತಿಲ್ಲ ಬಹುಶಃ ಅವನು ಏಕಾಂತದಲ್ಲಿ ಇರುವಾಗ ಮನಮೆಚ್ಚುವಂತೆ ವರ್ತಿಸುತ್ತಿರಬಹುದೇ ಹೇಗೆ?'

ಏಕಾಂತದಲ್ಲಿ ಕೀರ್ತಿ ಮನಸಾರೆ ಹತ್ತಿರವಾಗಲು ನೋಡಿದರೆ ಸಾಕು, ಕಿಶೋರ ಸ್ಪಂದಿಸದೆ ಹಿಂದೇಟು ಹಾಕುತ್ತಾನೆ. ಇಬ್ಬರ ಭಾವನೆಗಳ ನಡುವೆ ಇವಳಿಗೊಂದು ಕಂದರ ಕಾಣುತ್ತದೆ, ಹಾಗೂ ಕಂದರದ ಆಚೆ ಕಿಶೋರ ನಿಂತುಕೊಂಡಿರುತ್ತಾನೆ. ಇವಳು ಸೇತುವೆಯನ್ನು ಕಟ್ಟಲು ಹೊರಡುವಾಗ ಅವನು ಕಂದರವನ್ನು ಇನ್ನಷ್ಟು ವಿಸ್ತರಿಸುತ್ತ ಅಂತರ ಕಾಪಾಡಿಕೊಳ್ಳುತ್ತಾನೆ. ಆಗ ಇವಳು ಅವನನ್ನು ಟೀಕಿಸುತ್ತಾಳೆ, ಬಯ್ಯುತ್ತಾಳೆ. ಅವನು, 'ನಿನಗೆ ಬುದ್ಧಿ ಸರಿಯಿಲ್ಲ, ನಿನ್ನ ಅಪೇಕ್ಷೆ– ನಿರೀಕ್ಷೆಗಳು ಅತಿರೇಕ' ಎಂದಂದು ಬಾಯಿ ಮುಚ್ಚಿಸುತ್ತಾನೆ. ಹಾಗೆಂದು ಆಕೆ ಅವನಿಂದ ದೂರ ಸರಿದರೆ, ಜಿದ್ದಿನಿಂದ ಆಕೆಗೇ ಅಂಟಿಕೊಳ್ಳುತ್ತಾನೆ. ಕೆಲವೊಮ್ಮೆ ನನ್ನನ್ನು ಬಿಡಬೇಡ ಎಂದು ಅಳುತ್ತಾನೆ. ಹಾಗೆಂದು ನಾನು ಹೀಗೆ ಎಂದು ಹಂಚಿಕೊಳ್ಳಲು ಶುರುಮಾಡಿದರೆ ಮತ್ತೆ ಮುರುಟಿಕೊಳ್ಳುತ್ತಾನೆ, ಅಥವಾ ಕೆಲಸದ ನೆಪದಲ್ಲಿ ದೂರವಾಗುತ್ತಾನೆ. ಒಟ್ಟಾರೆ ಇವಳದೇ ದೋಷ ಎನ್ನುವಂತೆ ಆರೋಪಿಸಿ, ತಪ್ಪಿತಸ್ಥಭಾವ ಹುಟ್ಟಿಸಿ ಕೈಬಿಡುತ್ತಾನೆ.

ಅವರಿಬ್ಬರ ಕಾಮಕೂಟದ ಬಗೆಗೆ ಇನ್ನಷ್ಟು ವಿವರ ಕೇಳಿದೆ. ಕೀರ್ತಿ ಹೇಳಿದ್ದರಲ್ಲಿ ಎರಡು ಅನಿರೀಕ್ಷಿತ ಅಂಶಗಳಿದ್ದುವು. ಒಂದು, ಕಿಶೋರನ ಗುದಸಂಭೋಗದ ಆಸೆ. ಇವಳು ಮನಸ್ಸಿಲ್ಲದೆ ಒಂದೆರಡು ಸಲ ಗುದಸಂಭೋಗದಲ್ಲಿ ತೊಡಗಿಸಿಕೊಂಡು ನೋವಾಗಿ ಹಿಂತೆಗೆದಿದ್ದಾಳೆ. ಅವನ ಪ್ರತಿಕ್ರಿಯೆ? 'ನನ್ನ ಸ್ನೇಹಿತರ ಹೆಂಡಂದಿರು ಅವರಿಗೆ ಎಷ್ಟು ಚೆನ್ನಾಗಿ ಸಹಕಾರ ಕೊಡುತ್ತಾರೆ, ನಿನಗೇನಾಗಿದೆ?' ಎಂದು ಅವಹೇಳನ ಮಾಡಿದ್ದಾನೆ. ಎರಡು, ಅವನಿಗೆ ಇಬ್ಬರು ಹೆಂಗಸರನ್ನು ಏಕಕಾಲಕ್ಕೆ ಅನುಭವಿಸುವ ಒತ್ತಾಸೆಯಿದೆ. ಇವಳು ಒಪ್ಪಿದರೆ ಸಾಕು, ಅಂತರ್ಜಾಲಾಡಿ ಅದಕ್ಕೊಪ್ಪುವ ಹುಡುಗಿಯನ್ನು ತರುತ್ತಾನಂತೆ. ಇವಳಿಗೆ ತಲೆಕೆಟ್ಟು ಜಗಳ ಆಡಿದ್ದಾಳೆ. ಅವನು ಪಟ್ಟು ಬಿಡುವುದಿಲ್ಲ ಎನ್ನುವಾಗ, ಇನ್ನೊಂದು ಹುಡುಗಿಯ ಬದಲು ಹುಡುಗನೇಕೆ ಬೇಡ ಎಂದು ಕೆಣಕಿದಾಗ ಕೆನ್ನೆಗೇಟು ತಿಂದವನಂತೆ ಮೌನವಾಗಿದ್ದಾನೆ. ಎರಡು ದಿನ ಬಿಟ್ಟು ಮತ್ತದೇ ಮಾತು ಎತ್ತುತ್ತಾನೆ. ಇದೆಲ್ಲ ಆಕೆಗೆ ಹೇಗೆನ್ನಿಸುತ್ತದೆ? ಅನ್ಯೋನ್ಯ ಬಾಂಧವ್ಯಕ್ಕಾಗಿ ತನ್ನ ಶರೀರವನ್ನು ಒಪ್ಪಿಸಿಕೊಳ್ಳುತ್ತಿದ್ದರೆ ಅದನ್ನು ತನ್ನಿಷ್ಟದಂತೆ ಬಳಸಿಕೊಂಡು ಆಕೆಯ ಭಾವನೆಗಳನ್ನು ತುಚ್ಛೀಕರಿಸುತ್ತಿದ್ದಾನೆ. ಕನಿಷ್ಠ ಬೆಲೆಯನ್ನಾದರೂ ಕೊಡದೆ ವೇಶ್ಯೆಯಂತೆ ನಡೆಸಿಕೊಳ್ಳುತ್ತಿದ್ದಾನೆ ಎಂದು ಅತ್ತಳು. ಹಾಗಿದ್ದರೂ ಅವನಿಗೇಕೆ ಅಂಟಿಕೊಂಡಿದ್ದಾಳೆ ಎಂದು ಕೇಳಬೇಕೆನ್ನುವಾಗ ಆಕೆ ಇನ್ನೊಂದು ಸಂಗತಿಯನ್ನೂ ಹೇಳಿಕೊಂಡಳು.

ಕೀರ್ತಿ ತವರಿಗೆ ಹೋದವಳು ಒಂದು ಮುಂಜಾನೆ ಮರಳಿದಳು. ಮನೆಯೊಳಗೆ ಕಾಲಿಡುವವಳನ್ನು ಆಘಾತ ಕಾಯುತ್ತಿತ್ತು. ಕಿಶೋರ ಸ್ನಾನ ಮುಗಿಸಿ ಪಡಸಾಲೆಗೆ ಬಂದು ಸೋಫಾದ ಮೇಲೆ ಕುಳಿತ. ಅವನನ್ನು ನೋಡಿ ಕೀರ್ತಿ ಕಲ್ಲಾದಳು. ಯಾಕೆ? ಕಿಶೋರನ ಮೈಮೇಲೆ ಒಂಚೂರೂ ಬಟ್ಟೆ ಇರಲಿಲ್ಲ! ಹೌಹಾರಿ ಕೇಳಿದಾಗ, ಜನನಾಂಗದ ತುದಿಗೆ ಸೋಂಕು ಆಗಿದೆ, ಚಡ್ಡಿ ಹಾಕಿಕೊಂಡರೆ ತಾಗುತ್ತದೆ ಎಂದ. ಇವಳು ಸನ್ನಿವೇಶವನ್ನು ಅರ್ಥೈಸಿಕೊಳ್ಳುತ್ತಿರುವಾಗ ಕಿಶೋರನ ಅಮ್ಮ ಅವನೆದುರು ಹಾಯ್ದುಹೋದಳು. ಕಿಶೋರ ಏನನ್ನೂ ಮುಚ್ಚಿಟ್ಟುಕೊಳ್ಳದೆ ಆರಾಮವಾಗಿದ್ದ. ಸಾಕಾಗದ್ದಕ್ಕೆ ಅಮ್ಮನ ಎದುರು ಬಿಡುಬೀಸಾಗಿ ಓಡಾಡುತ್ತಿದ್ದ. ಆಕೆಯೋ ತನ್ನ ಪಾಡಿಗೆ ತಾವಿದ್ದರು. ಕೀರ್ತಿಗೆ ಸೈರಣೆ ತಪ್ಪಿ ಅತ್ತೆಗೆ ಕೇಳಲಾಗಿ, ಆಕೆ ಕೈಚೆಲ್ಲಿ ಹೇಳಿದರು: 'ಈ ಮನೆಯ ಗಂಡಸರೆಲ್ಲ ಹೀಗೆಯೆ!' ಮಾವ ಮಡಿಪಂಚೆಯಲ್ಲಿ ಪೂಜೆಗೆ ಕೂತಾಗ ಅವರ ಖಾಸಗಿ ಭಾಗಗಳು ಕೆಲವೊಮ್ಮೆ ಇಣುಕಿದ್ದನ್ನು ಇವಳೂ ನೋಡಿದ್ದಾಳೆ. ವಿಪರ್ಯಾಸ ಏನೆಂದರೆ, ಆಗ ಕಿಶೋರ ಅಸಹ್ಯಪಟ್ಟುಕೊಂಡು ಮುಚ್ಚಿಟ್ಟುಕೊಳ್ಳುವಂತೆ ರೇಗಿದ್ದಾನೆ. ಅಪ್ಪನಿಗೆ ಬುದ್ಧಿಹೇಳುವವ ತಾನೇ ಮನೆ ತುಂಬ ಬೆತ್ತಲೆ ಓಡಾಡುತ್ತಿದ್ದಾನೆ! ಆಕ್ಷೇಪಿಸಿದರೂ ಅಲಕ್ಷಿಸಿದವನನ್ನು ತರಾಟೆಗೆ ತೆಗೆದುಕೊಂಡಾಗ ಹೆಂಡತಿಯ ಎದುರು ಪಂಚೆ ಸುತ್ತಿಕೊಳ್ಳುವಂತಾದ. ಈಕೆ ಮರೆಯಾದರೆ ಸಾಕು, ಅಮ್ಮನ ಎದುರು ಮತ್ತೆ ಬೆತ್ತಲೆ ಓಡಾಡುತ್ತಿದ್ದ.

'ಡಾಕ್ಟರ್, ಅವನ ವರ್ತನೆ ಏನು ಹೇಳುತ್ತದೆ?' ಕೀರ್ತಿ ಪ್ರಶ್ನಿಸಿದಳು. ನನಗೆ ಸಿಗ್ಮಂಡ್ ಫ್ರೈಡ್ ನೆನಪಾದ.

ನಾನು, 'ಅವನ ವರ್ತನೆ ಒತ್ತಟ್ಟಿಗಿರಲಿ, ನಿಮ್ಮ ವರ್ತನೆ ಏನು ಹೇಳುತ್ತದೆ?' ಎಂದೆ. ಅವಳಿಗೆ ಅರ್ಥವಾಗಲಿಲ್ಲ, ವಿವರಿಸಬೇಕಾಯಿತು. 'ಹೀಗೆ ಕೇಳುತ್ತೇನೆಂದು ತಪ್ಪು ತಿಳಿಯಬೇಡಿ: ಕಿಶೋರನಿಗೆ ಮತಿಭ್ರಮಣೆ ಆಗಿದೆಯೆ?' ಆಕೆ ದೃಢವಾಗಿ ಇಲ್ಲವೆಂದಳು. 'ಹಾಗಾದರೆ ಅವನ ಈ ವರ್ತನೆಯು ಬುದ್ಧಿಪೂರ್ವಕ ಎಂದಂತಾಯಿತು, ಹೌದೆ?' ತಲೆದೂಗಿದಳು. 'ಅವನು ಬೆತ್ತಲೆ ಇರುವುದು ಬೇಕೆಂತಲೇ ಎಂದು ಗೊತ್ತಾದಾಗ ನೀವೇಕೆ ಕೂಡಲೇ ಮರಳಿ ತವರಿಗೆ ಹೋಗಲಿಲ್ಲ? ಬಯ್ಯುತ್ತ ಅಲ್ಲಿಯೇ ಇರುವ ಉದ್ದೇಶ ಏನಿತ್ತು? ಇದರಿಂದ ಅವನಿಗೆ ಏನು ಹೇಳಿದಂತಾಯಿತು?' ಈಗ ಕೀರ್ತಿ ನಿಜಕ್ಕೂ ದಿಙ್ಮೂಢಳಾದಳು. ನಾನು ಇನ್ನಷ್ಟು ವಿವರಿಸಿದೆ. ಲೈಂಗಿಕ ಸಂಗಾತಿಯ ಎದುರು ಪ್ರದರ್ಶಿಸಬೇಕಾದ ನಗ್ನತೆಯನ್ನು ಅವನು ತಾಯಿಯ ಮುಂದೆ ತೋರಿಸುತ್ತಿದ್ದಾನೆ ಅಂದರೆ ಅವನಿಗೆ ತನ್ನ ಹಾಗೂ ಪರರ ನಡುವಿನ ಮಿತಿಮೇರೆಗಳು ಸ್ಪಷ್ಟವಾಗಿಲ್ಲದೆ ಬಾಲಿಶವಾಗಿವೆ. ಅಂಥವನೊಂದಿಗೆ ನೀವು ಬದುಕನ್ನು ಆಯ್ಕೆ ಮಾಡಿಕೊಳ್ಳಬೇಕಾದರೆ – ಹಾಗೆಂದು ನಿಮ್ಮ ಮೇಲೆ ಯಾರೂ ಒತ್ತಾಯ ತಂದಿಲ್ಲ – ನಿಮ್ಮ ಮೌಲ್ಯಗಳು ಎಂಥವು? ಸ್ವಲ್ಪ ಯೋಚಿಸಿ.'

ಕೀರ್ತಿ ಶೂನ್ಯ ದೃಷ್ಟಿಯಿಂದ ಕುಳಿತು ಮೌನವಾಗಿ ಅಳಲು ಪ್ರಾರಂಭಿಸಿದಳು. ಸುಮಾರು ಹೊತ್ತಿನ ನಂತರ ಹೇಳಿದಳು. 'ನನ್ನ ತೊಂದರೆ ಏನೆಂದರೆ, ಅವನನ್ನು ಬಿಟ್ಟಿರಲಾರೆ. ಅವನಿಲ್ಲದೆ ಒಂಟಿತನ ಕಿತ್ತು ತಿನ್ನುತ್ತದೆ!'

ಕಳಪೆ ಬಾಲಿಶ ಗಂಡನ ಮೇಲಿನ ಅತ್ಯಾವಲಂಬನೆಯಿಂದ ಹೊರಬರಲು ಕೀರ್ತಿಗೆ ಹೇಗೆ ಸಹಾಯ ಮಾಡಿದೆ ಎಂಬುದನ್ನು ಮುಂದಿನ ಸಲ ಹೇಳುತ್ತೇನೆ.

ಉಚಿತ ಸಹಾಯವಾಣಿಗೆ ಮಂಗಳವಾರ ಹಾಗೂ ಶುಕ್ರವಾರ ಕರೆಮಾಡಿ. ಲೈಂಗಿಕ ಸಮಸ್ಯೆಗಳಿಗೆ: **8050255229** (3ರಿಂದ 5ರ ತನಕ); ದಾಂಪತ್ಯ ಸಮಸ್ಯೆಗಳಿಗೆ: **8494944888** (11ರಿಂದ ಸಂಜೆ 5ರ ತನಕ).